# ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 220

**10 ಜನವರಿ 2020 * ಶುಕ್ರವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಗಾಯನ

ಪಂ. ಇಂದೂಧರ ನಿರೋಡಿ



ಸಹ ಗಾಯನ

ಪಂ. ವೀರಭದ್ರಯ್ಯ ಹಿರೇಮಠ್



ಹಾರ್ಮೋನಿಯಂ

ಪಂ. ಶ್ರೀರಾಮ್ ಭಟ್



ತಬಲ

ಪಂ. ರಮೇಶ್ ಧನ್ನೂರ್

# ಬೆಳದಿಂಗಳ ಸಂಗೀತ 221

**9 ಫೆಬ್ರವರಿ 2020**

ಗಾಯನ

ವಿದ್ವಾನ್ ಎನ್. ಶ್ರೀನಾಥ್

ವಯೊಲಿನ್

ವಿದ್ವಾನ್ ಮೈಸೂರು ಎಂ. ಕೇಶವ

ಮೃದಂಗ

ವಿದ್ವಾನ್ ವಿ.ಎಸ್. ರಾಮಾನುಜಂ

**ಪಂ. ಇಂದೂಧರ ನಿರೋಡಿಯವರು** ಆಗ್ರಾ ಘರಾನೆಯ ಖ್ಯಾತ ಸಂಗೀತಗಾರರಲ್ಲೊಬ್ಬರು. ಪ್ರಾರಂಭಿಕ ಶಿಕ್ಷಣವನ್ನು ಗವಾಯಿ ಶ್ರೀ ಪಿತ್ರೆ ರಾಮರಾವ್‌ರಿಂದ ಪಡೆದರು. ಬಳಿಕ ಪಂ. ಗುರುದತ್ತ ಹೆಬ್ಲೇಕ, ಆಚಾರ್ಯ ಎಸ್.ಸಿ.ಆರ್. ಭಟ್, ಆಚಾರ್ಯ ಕೆ.ಜಿ. ಗಿಂಡೆ, ಪಂ. ದಿನಕರ ಕಾಯ್ಕಿಣಿ ಹಾಗೂ ಪಂ. ಚಿದಾನಂದ ನಗರಕರ್‌ರವರುಗಳ ಬಳಿ ಎರಡು ದಶಕಗಳಿಗೂ ಹೆಚ್ಚು ಕಾಲ ಶಿಷ್ಯವೃತ್ತಿ ನಡೆಸಿದರು. 1955ರಲ್ಲಿ ರಾಷ್ಟ್ರಮಟ್ಟದ ಆಕಾಶವಾಣಿ ಸಂಗೀತ ಸ್ಪರ್ಧೆಯಲ್ಲಿ ಮೊದಲನೆಯ ಬಹುಮಾನ ಗಳಿಸಿದರು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಮೈಸೂರಿನ ಡಾ. ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕರ್ನಾಟಕ ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕ್ಯಾಡಮಿಯ ಪುರಸ್ಕಾರಗಳು ಲಭಿಸಿವೆ. ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ದೊರೆತಿದೆ.

**ಪಂ. ವೀರಭದ್ರಯ್ಯ ಹಿರೇಮಠರವರು** ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ಡಾ. ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರು. ಗುರುಕುಲ ಪದ್ಧತಿಯಲ್ಲಿ ಸಂಗೀತವನ್ನು ಮೈಗೂಡಿಸಿಕೊಂಡವರು. ಗಂಧರ್ವ ಮಹಾವಿದ್ಯಾನಿಲಯದ ಸಂಗೀತ ವಿಶಾರದರು. ಅತ್ಯುತ್ತಮ ಹಾರ್ಮೋನಿಯಂ ವಾದಕರು. ಗದುಗಿನ ಗಾನಗಂಧರ್ವ ಕಲಾ ಟ್ರಸ್ಟ್ ಇವರಿಗೆ 'ಗಾನಶ್ರೀ' ಬಿರುದನ್ನು ನೀಡಿ ಸನ್ಮಾನಿಸಿದೆ. ಮೈಸೂರಿನ ಸ್ವರಸಂಕುಲ ಸಂಗೀತಶಾಲೆಯ ಮೂಲಕ ಭವಿಷ್ಯದ ಕಲಾವಿದರನ್ನು ರೂಪಿಸುತ್ತಿದ್ದಾರೆ; ಹಿಂದೂಸ್ತಾನಿ ಸಂಗೀತದ ಪ್ರಸಾರಕ್ಕಾಗಿ ಶ್ರಮಿಸುತ್ತಿದ್ದಾರೆ.

**ಪಂ. ಬಿ. ಶ್ರೀರಾಮ ಭಟ್‌ರವರು** ಕರ್ನಾಟಕ ಸಂಗೀತದಲ್ಲಿ ವಿದ್ವತ್ ಪದವಿ ಪಡೆದಿದ್ದಾರೆ. ವಿದ್ವಾನ್ ಕಾಂಚನ ನಾರಾಯಣ ಭಟ್, ವಿದುಷಿ ಸಾವಿತ್ರಿ ಭಟ್ ಅಮ್ಮೈ, ವಿದ್ವಾನ್ ಬಳ್ಳಾರಿ ಎಂ. ವೆಂಕಟೇಶಾಚಾರ್, ವಿದ್ವಾನ್ ಎಂ. ರಾಘವೇಂದ್ರ, ಪಂ. ಯೋಗೀಶ್ ಬಾಳಿಗ, ಪಂ. ವೀರಭದ್ರಯ್ಯ ಹಿರೇಮಠ ಇವರ ಗುರುಗಳು. ಹಿಂದೂಸ್ತಾನಿ ಸಂಗೀತದಲ್ಲೂ ಪರಿಶ್ರಮ ಹೊಂದಿದ್ದಾರೆ. ರಾಜ್ಯಮಟ್ಟದ ರಾಗ–ತಾನ–ಪಲ್ಲವಿ ಹಾಗೂ ಇತರ ಶಾಸ್ತ್ರೀಯ ಸಂಗೀತ ಸ್ಪರ್ಧೆಗಳಲ್ಲಿ ಬಹುಮಾನ ಪಡೆದಿದ್ದಾರೆ. ತಾಳವಾದ್ಯಗಳು ಹಾಗೂ ಹಾರ್ಮೋನಿಯಂನಲ್ಲಿ ಪರಿಣತಿ ಹೊಂದಿದ್ದಾರೆ. ರಾಜ್ಯದ ಹಲವಾರು ಪ್ರಮುಖ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ.

**ಪಂ. ರಮೇಶ್ ಧನ್ನೂರ್‌ರವರು** ಹಿರಿಯ ತಬಲಾ ವಾದಕರು. ಗದುಗಿನ ಪಂ. ಪುಟ್ಟರಾಜ ಗವಾಯಿಗಳ ಬಳಿ ಶಿಷ್ಯವೃತ್ತಿ ಮಾಡಿದ್ದಾರೆ. ನಾಡಿನ ಅನೇಕ ಹೆಸರಾಂತ ಕಲಾವಿದರಿಗೆ ತಬಲಾ ಸಾಥ್ ನೀಡಿದ್ದಾರೆ.

**ಫೋನ್: 0821–2548220, 2548221 * ಫ್ಯಾಕ್ಸ್: 0821–2548219 * ಇಮೇಲ್: jssashram@yahoo.com**